**ಸಾಕ್ಷಿಯನ್ನು ದಿನಾಂಕ *24.02.2026* ರಂದು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತುಃ**

**ಮುಂದುವರೆದ ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ಸರ್ಕಾರಿ ಅಭಿಯೋಜಕರು ಸಾಕ್ಷಿದಾರರ ಮುಂದುವರೆದ ಮುಖ್ಯ ವಿಚಾರಣೆ ಇರುವುದಿಲ್ಲ ಎಂದು ಹೇಳಿರುತ್ತಾರೆ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ**

ನಾನು ಬಳಸಿದ್ದೆ ಎಂದು ಹೇಳುವ ಕ್ಯಾಮೆರಾ ಸೋನಿ ಕ್ಯಾಮೆರಾ ಇತ್ತು. ಆ ಸೋನಿ ಕ್ಯಾಮೆರಾ ಯಾವ ಮಾಡೆಲ್ ಮತ್ತು ಯಾವ ವರ್ಷದ್ದು ಇತ್ತು ಎಂದು ಹೇಳಲು ಆಗುವುದಿಲ್ಲ. ಯಾವ ಲ್ಯಾಬ್ ನಲ್ಲಿ ಫೋಟೋಗಳನ್ನು ಪ್ರಿಂಟ್ ಹಾಕಿಸಿತ್ತು ಮತ್ತು ಯಾವ ಕಂಪ್ಯೂಟರ್ ಸೆಂಟರ್ ನಲ್ಲಿ ಸಿಡಿ ಮಾಡಿತ್ತು ಎಂದು ನನ್ನ ಪ್ರಮಾಣ ಪತ್ರದಲ್ಲಿ ಹೇಳಿರುವುದಿಲ್ಲ ಎಂದರೆ ಸರಿ. ಆ ದಿನ ತಾರೀಖು, ದಿನಾಂಕ ಮತ್ತು ಇಸವಿ ಬರುವಂತಹ ಕ್ಯಾಮೆರಾಗಳನ್ನು ಬೇರೆ ಕಡೆಗಳಿಂದ ಪಡೆದುಕೊಂಡು ಫೋಟೋ ತೆಗೆಯಲು ತೊಂದರೆ ಇರಲಿಲ್ಲ ಆದರೆ ನಮಗೆ ಸರ್ಕಾರದವರು ಕೊಟ್ಟಿದಂತಹ ಕ್ಯಾಮೆರಾದಲ್ಲಿ ಫೋಟೋ ತೆಗೆದಿರುತ್ತೇನೆ. ತಾರೀಖು, ದಿನಾಂಕ ಮತ್ತು ಇಸವಿ ಬರದೇ ಇರುವ ಕ್ಯಾಮೆರಾದಲ್ಲಿ ಫೋಟೋಗಳನ್ನು ತೆಗೆದರೆ ನಮಗೆ ಅನುಕೂಲವಾಗುವ ರೀತಿಯಲ್ಲಿ ಮಾಡಿಕೊಳ್ಳಬಹುದು ಎನ್ನುವ ಉದ್ದೇಶದಿಂದ ಫೋಟೋಗಳನ್ನು ತೆಗೆದಿರುತ್ತದೆ ಎಂದರೆ ಸರಿಯಲ್ಲ. ಆ ದಿನ ಪೊಲೀಸ್

ಠಾಣೆಯನ್ನು ಮಧ್ಯಾಹ್ನ 12.45 ಗಂಟೆಗೆ ಬಿಟ್ಟು ಸ್ಥಳ ಕ್ಕೆ 1.00 ಗಂಟೆಗೆ ಹೋಗಿದ್ದೆವು. ಪೊಲೀಸ್ ಠಾಣೆಯಿಂದ ಆ ದಿನ ಹೋಗಿದ್ದೆವು ಎನ್ನುವ ಮನೆಗೆ ಸುಮಾರು 2 ಕಿ.ಮೀಟರ್ ಅಂತರ ಇತ್ತು. ಶೋಧನಾ ಅಮಾನತ್ತು ಪಂಚನಾಮೆಯಲ್ಲಿ ಆ ದಿನ ಅಮಿತ್ ಕುಮಾರ್ ರವರಿಗೆ ನೋಟೀಸ್ ಕೊಟ್ಟಿತ್ತು ಎಂದು ನಮೂದು ಆಗದೇ ಇದ್ದರೂ ಸಹ ಆ ದಿನ ನಮೂದು ಆಗದೇ ಇದ್ದರೂ ಸಹ ಆರೋಪಿತನ ಅಕ್ಕನ ಮಗನಾದ ಅಮಿತ್ ಕುಮಾರ್ ರವರಿಗೆ ನೋಟೀಸ್ ಕೊಟ್ಟಿತ್ತು ಎಂದು ಹೇಳಿರುತ್ತೇನೆ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೆ ಅನುಕೂಲಕ್ಕೆ ತಕ್ಕಂತೆ ಆಯ್ಕೆ ಮಾಡಿಕೊಂಡು ಫೋಟೋಗಳನ್ನು ಹಾಕಿರುತ್ತೇವೆ ಎಂದರೆ ಸರಿಯಲ್ಲ. ವೇದಾವತಿ ಯನ್ನು ಹಿಡಿಯುವ ಬಗ್ಗೆ ನನಗೆ ಸೂಚನೆ ಕೊಟ್ಟಿದ್ದರಿಂದ ಹಿಡಿಯುವ ಕಡೆ ನನಗೆ ಗಮನ ಇದ್ದುದರಿಂದ ಓಡಿ ಹೋಗುವ ದೃಶ್ಯವನ್ನು ಫೋಟೋ ತೆಗೆಯಲು ಪ್ರಯತ್ನಿಸಿರಲಿಲ್ಲ. ಆ ದಿನ ಜಯಂತ್ ಮತ್ತು ಸಂಜಯ್ ಪಂಚರು ರಸ್ತೆಯಲ್ಲಿ ನಡೆದುಕೊಂಡು ಬರುತ್ತಿದ್ದರು. ಆ ಇಬ್ಬರು ಪಂಚರು ನಮ್ಮ ಠಾಣೆಯ ಎಲ್ಲಾ ಪ್ರಕರಣಗಳ ಪಂಚರು ಇರುತ್ತಾರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಆ ದಿನ ಪಂಚರನ್ನು ಶೋಧನಾ ಮತ್ತು ಸ್ಥಳ ಪಂಚನಾಮೆಯಲ್ಲಿ ಸ್ಥಳ ಕ್ಕೆ ಬರಮಾಡಿಕೊಂಡಿದ್ದೆವು ಎಂದು ಉಲ್ಲೇಖ ಇರುತ್ತದೆ ಎಂದರೆ ಸರಿಯಲ್ಲ. ಆ ಪಂಚರು ನಮ್ಮ ಠಾಣೆಯ ಪ್ರಕರಣಗಳ ಖಾಯಂ ಸಾಕ್ಷಿದಾರರು ಇರುತ್ತಾರೆ ಎಂದರೆ ಸರಿಯಲ್ಲ. ಪಂಚನಾಮೆ ಸಂಜೆ 6.00 ಗಂಟೆಗೆ ಮುಗಿದಿತ್ತು. ಸಂಜೆ 6.00 ಗಂಟೆ ಸುಮಾರಿಗೆ ಪಂಚನಾಮೆ ಪ್ರಕ್ರಿಯೆ ಮುಗಿದ ಮೇಲೆ ಬನ್ನಿ ಪೊಲೀಸ್ ಠಾಣೆಗೆ ಹೋಗೋಣ ಎಂದು ಹೇಳಿದಾಗ ಆರೋಪಿ ವೇದಾವತಿ ರವರು ವಾಷ್ ರೂಂ ಗೆ ಹೋಗಿ

ಬರುತ್ತೇನೆ ಎಂದು ಹೇಳಿ ಒಳಗಡೆ ಹೋಗಿ ವಾಪಸ್ಸು ಬಂದಾಗ ನನಗೆ ಏಕೋ ತಲೆ ಸುತ್ತುತ್ತಿದೆ ಮಾತ್ರೆ ತೆಗೆದುಕೊಂಡಿರುತ್ತೇನೆ ಎಂದು ಹೇಳಿದ್ದರು. ಸ್ಥಳ ತನಿಖೆ ನಡೆಯುವ ಸಂದರ್ಭದಲ್ಲಿ ಮಧ್ಯಾಹ್ನದ ವೇಳೆಯಲ್ಲಿ ಆರೋಪಿತರು ಮಾತ್ರೆ ತೆಗೆದುಕೊಂಡಿದ್ದರು ಅದೇ ಕಾರಣಕ್ಕಾಗಿ ಅವರನ್ನು ಆ ವೇಳೆಗೆ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು ಪಂಚನಾಮೆ ಪ್ರಕ್ರಿಯೆ ಅಲ್ಲಿ ಅವರು ಇರಲಿಲ್ಲ ಎಂದರೆ ಸರಿಯಲ್ಲ.

ಆ ದಿನ ನಾವುಗಳು ಈಗಾಗಲೇ ನಿಶಾನೆಗೆ ಒಳಪಡಿಸಿದ ದಾಖಲೆಗಳನ್ನು ಅಲ್ಲದೇ ಬೇರೆ ದಾಖಲೆಗಳನ್ನು ವಶಪಡಿಸಿಕೊಂಡಿದ್ದೆವು ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ. ಆ ದಿನ ಅಮಾನತ್ತು ಪಡಿಸಿಕೊಂಡಂತಹ ಎಲ್ಲಾ ದಾಖಲಾತಿಗಳ ಬಗ್ಗೆ ಫೋಟೋ ತೆಗೆದಿದ್ದರೆ ಆ ಬಗ್ಗೆ ಪರಿಪೂರ್ಣ ಮಾಹಿತಿ ದೊರಕುತ್ತಿತ್ತು ಎಂದರೆ ಆ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ತನಿಖಾಧಿಕಾರಿಯವರನ್ನು ಕೇಳಬೇಕಾಗುತ್ತದೆ. ನಾವುಗಳು ಪ್ರಕರಣಕ್ಕೆ ಅನುಕೂಲವಾಗುವ ದಾಖಲೆಗಳನ್ನು ಮಾತ್ರ ಹಾಜರುಪಡಿಸಿದ್ದು ಬೇರೆ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಆ ಬಗ್ಗೆ ತನಿಖಾಧಿಕಾರಿಯವರನ್ನು ಕೇಳಬೇಕಾಗುತ್ತದೆ.

**ಮರು ವಿಚಾರಣೆ:– ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
*ಮೈಸೂರು*